# ಆಹಾ ಸುದ್ದಿ!

★ ಸಸಿತೋಟ



ಪೆನ್ಸಿಲ್ವೇನಿಯಾದ ಈ ಬಾಲೆ ಬೋಬೆಲ್ಲಾ. ತಲೆ ಕೆಳಗಾಗಿ ನಿಂತು ಬಿಲ್ಲು–ಬಾಣ ಹೊಡೆಯುವ ಕಲೆಯನ್ನು ಸಿದ್ಧಿಸಿಕೊಂಡಿದ್ದಾಳೆ. ಇದಕ್ಕಾಗಿ ಆಕೆ ಅಪಾರ ಶ್ರಮ ಹಾಕಿದ್ದಾಳಂತೆ. ಕಣ್ಣಿನಲ್ಲೇ ಬಾಣ ಬಿಡುವ ಕಲೆಗೆ ಶ್ರಮ ಹಾಕುವುದೇ ಬೇಡ. ಹದಿ ಹರೆಯಕ್ಕೆ ಬಂದ ಮೇಲೆ ತನ್ನಿಂದ ತಾನೇ ಒಲಿದುಬಿಡುತ್ತದೆ.

ಆ ಕೊಠಡಿಯಲ್ಲಿ ಕಿಂಗ್‌ಸೈಜ್ ಹಾಸಿಗೆ, ಹೊಳೆಯುವ ಸ್ಯಾಟಿನ್ ಹೊದಿಕೆ, ವೆಲ್ವೆಟ್ ದಿಂಬು.. ಯಾವುದೋ ಐಷಾರಾಮಿ ಹೋಟೆಲ್‌ನ ಕೊಠಡಿ ಎಂದುಕೊಳ್ಳಬೇಡಿ. ಇದು ಟೋಕಿಯೋದ ಹೆರಿಗೆ ಆಸ್ಪತ್ರೆಯೊಂದರ ವಾರ್ಡ್. 6 ದಿನಗಳಿಗೆ 75 ಸಾವಿರ ಪೌಂಡ್ ನೀಡಿದರೆ ಈ ರಾಣಿ ಎಲಿಜಬೆತ್ ಹೆಸರಿನ ಕೊಠಡಿಯಲ್ಲಿ ಹೆರಿಗೆ ಮಾಡಿಸಿಕೊಳ್ಳಬಹುದು. ಜೊತೆಗೆ ತ್ವಚೆ, ತಲೆಗೂದಲಿನ ಆರೈಕೆ, ಮಗು ಹುಟ್ಟಿದ್ದಕ್ಕೆ ಹಬ್ಬದೂಟ ಉಚಿತ. ಹೆರಿಗೆ ಆಸ್ಪತ್ರೆಯಲ್ಲೇ ಹೋಟೆಲ್, ಬ್ಯೂಟಿ ಪಾರ್ಲರ್.. ಇನ್ನೂ ಏನೇನು ಬರುತ್ತದೋ!



ಇಂಗ್ಲೆಂಡ್‌ನಲ್ಲಿ ಬೆಕ್ಕೊಂದು ಸಂಚಾರ ನಿಯಮಗಳನ್ನು ಕರಾರುವಾಕ್ಕಾಗಿ ಪಾಲಿಸುತ್ತದಂತೆ. ರಸ್ತೆ ದಾಟುವಾಗ ಎರಡೂ ಕಡೆ ನೋಡಿಕೊಂಡು ವಾಹನ ಸಂಚಾರ ನಿಂತ ಮೇಲೆ ಝೀಬ್ರಾ ಕ್ರಾಸಿಂಗ್‌ನಲ್ಲೇ ದಾಟುತ್ತದಂತೆ. ಬೆಕ್ಕು ಜೀವ ವಿಮೆ ಮಾಡಿಸಿಲ್ಲ ಎನಿಸುತ್ತದೆ.

ಮಿಶಿಗನ್‌ನ ಬ್ರ್ಯಾಂಡನ್ ಹಾಗೂ ಕ್ಯಾಥಿ ದಂಪತಿ ತಮ್ಮ ಮದುವೆಯಲ್ಲಿ ಬಂಧುವೊಬ್ಬರು ಕೊಟ್ಟ ಉಡುಗೊರೆಯನ್ನು 9 ವರ್ಷಗಳ ನಂತರ ತೆರೆದು ನೋಡಿದರಂತೆ. ಆ ಉಡುಗೊರೆ ಪೆಟ್ಟಿಗೆಯ ಮೇಲೆ ಮೊದಲ ಬಾರಿ ಜಗಳವಾದಾಗ ತೆರೆಯಿರಿ ಎಂಬ ಸಂದೇಶವಿದ್ದಿದ್ದೇ ಅಷ್ಟು ತಡವಾಗಿ ತೆರೆಯಲು ಕಾರಣ. 9 ವರ್ಷಗಳಿಂದ ನಿತ್ಯ ಜಗಳವಾಡುತ್ತಿದ್ದ ದಂಪತಿ ಪೆಟ್ಟಿಗೆಯನ್ನು ನೋಡಿ ರಾಜಿ ಆಗುತ್ತಿದ್ದರಂತೆ. ರಾಜಿಸೂತ್ರವೆಲ್ಲ ಖಾಲಿಯಾದಾಗ ಪೆಟ್ಟಿಗೆ ತೆರೆದರೆ ಒಳಗೆ ಇದ್ದಿದ್ದು ವೈನ್ ಕುಡಿಯುವ ಗ್ಲಾಸ್. ವೈನ್ ತಂದು ಕುಡಿಯಿರಿ, ಜಗಳ ಮರೆಯಿರಿ. ಕೊನೆಗೆ ಸಂಗಾತಿಯನ್ನೇ ಮರೆಯಿರಿ. ಉಡುಗೊರೆ ಕೊಟ್ಟವರು ಭಾರಿ ಅನುಭವಸ್ಥರೇ ಇರಬಹುದು.



ಫಿಲಿಡೆಲ್ಫಿಯಾದಲ್ಲಿ ಅಲ್ಲಿಯ ಚಿಲ್ಲರೆ ನಾಣ್ಯ ಪೆನ್ನಿಗಳನ್ನು ಒಯ್ಯುತ್ತಿದ್ದ ಟ್ರಕ್ ಒಂದು ರಸ್ತೆಯಲ್ಲಿ ಮಗುಚಿಕೊಂಡಿತಂತೆ. ಪೆನ್ನಿಗಳೆಲ್ಲ ಗಂಟೆಗಟ್ಟಲೆ ಅಲ್ಲಿಯೇ ಬಿದ್ದಿದ್ದವಂತೆ. ಖಾಲಿ ಪೆನ್ನಿಗಳ ಮೇಲೆ ತಮಗೆ ಬೇಕಾದ ಮೌಲ್ಯವನ್ನು ಮುದ್ರಿಸಿಕೊಳ್ಳಲು ಮುದ್ರಣಯಂತ್ರದ ಟ್ರಕ್‌ಗಾಗಿ ಕಾಯುತ್ತ ಕೂರುವ ವ್ಯವಧಾನ ಯಾರಿಗೂ ಇರಲಿಲ್ಲವೇನೋ!



ಇತ್ತೀಚೆಗೆ ಕೆನಡಾದ ವಲಸೆ ಅಧಿಕಾರಿಗಳಿಗೆ ಅಮೆರಿಕದಿಂದ ಬಂದ ಸಣ್ಣ ಸಣ್ಣ ಬೋಟ್‌ಗಳಲ್ಲಿರುವ ಜನರನ್ನು ವಾಪಸ್ಸು ಕಳಿಸುವುದೇ ದೊಡ್ಡ ತಲೆನೋವಿನ ಕೆಲಸವಾಯ್ತಂತೆ. ಯೂರೋಪ್‌ನಾದ್ಯಂತ ನಡೆಯುತ್ತಿರುವ ಮಹಾವಲಸೆ ಕೆನಡಾಗೂ ಬಂತೇ ಎಂದು ಅಧಿಕಾರಿಗಳು ತಲೆ ಕೆರೆದುಕೊಂಡರಂತೆ. ಆದರೆ ಪಾರ್ಟಿಯ ಮೋಜು–ಮಸ್ತಿಗೆಂದು ಬೋಟ್‌ಗಳಲ್ಲಿ ಕುಳಿತ ಮಂದಿಗೆ ಅವು ತೇಲುತ್ತ ಗಡಿಪಾರಾಗಿದ್ದೂ ಗೊತ್ತಾಗಲಿಲ್ಲವಂತೆ. ಮದಿರೆ ಸ್ವರ್ಗ ತೋರಿಸದಿದ್ದರೂ ಪಕ್ಕದ ದೇಶವನ್ನಾದರೂ ತೋರಿಸಿತಲ್ಲ!